**ಓ ಎಸ್ ನಂಃ 264-15**
**ಪಿ ಡಬ್ಲ್ಯೂ ಃ 1**

**ದಿಃ 11-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎ ಎಸ್ ಎಸ್ ವಕೀಲರಿಂದ**

ಸಿಂಗ್ರಿಪಾಳ್ಯದ ಸರ್ವೆ ನಂ 26 ರಲ್ಲಿ 2 ಎಕರೆ 16 ಗುಂಟೆ ಜಮೀನು ಹೋದ ದಿನಾಂಕದಿಂದ ಈ ದಿನಾಂಕದವರೆಗೆ ಅದು ಭೂ ಪರಿವರ್ತನೆ ಆಗಿರುವ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಇಲ್ಲ. 12 ನೇ ಪ್ರತಿವಾದಿಗೆ ಆದ ಕ್ರಯಪತ್ರದ ವಿಷಯವನ್ನು ಈ ದಾವೆ ಹೂಡುವ ಮೊದಲು ನಾನು ಓದಿ ತಿಳಿದುಕೊಂಡಿರುತ್ತೇನೆ. 12 ನೇ ಪ್ರತಿವಾದಿಗೆ ಆದ ಕ್ರಯಪತ್ರದಲ್ಲಿ ಸರ್ವೆ ನಂ 26/2 ಭೂ ಪರಿವರ್ತನೆ ಆಗಿದೆ ಎಂದು ನಮೂದು ಇದೆ ಎಂದರೆ ಗೊತ್ತಿಲ್ಲ. ನಂತರವೂ ಸಹ ಸರ್ವೆ ನಂ 26/2 ಭೂ ಪರಿವರ್ತನೆ ಆಗಿದೆಯೋ ಇಲ್ಲವೋ ಎಂಬುದರ ಬಗ್ಗೆ ಪರಿಶೀಲನೆ ಮಾಡಲು ಪ್ರಯತ್ನ ಪಟ್ಟಿಲ್ಲ.

ರಂಗಪ್ಪ ನನಗೆ ಚಿಕ್ಕಪ್ಪ ಆಗಬೇಕು ಸರ್ವೆ ನಂ 26 ರ ಸ್ವಾಧೀನತೆಯನ್ನು 5 ರಿಂದ 8 ನೇ ಪ್ರತಿವಾದಿಗಳು ಹೊಂದಿದ್ದು ಅವರೇ ಆ ಆಸ್ತಿಯನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರಿಂದ ಭೂ ಪರಿವರ್ತನೆ ವಿಷಯವನ್ನು ನಾನು ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಸರ್ವೆ ನಂ 26/2 ರ ಮೇಲೆ ಹೂಡದೇ 12 ನೇ ಪ್ರತಿವಾದಿಗೆ ತೊಂದರೆ ಕೊಡಲು ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ಅದು ಸರ್ವೆ ನಂ 26 ಇದ್ದು ಸದರಿ ಸರ್ವೆ ನಂ ಪೋಡಿಯಾಗಿರುವ ವಿಷಯ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 12 ನೇ ಪ್ರತಿವಾದಿಗೆ ಮಾರಾಟವಾದ ನಂತರ ಸರ್ವೆ ನಂ 26 ಪೋಡಿಯಾಗಿರುವ ವಿಷಯ ನನಗೆ ಗೊತ್ತಾಗಿರುತ್ತದೆ. ಈ ವಿಷಯ ನನಗೆ ಈ ದಾವೆ ಹೂಡುವ ಮೊದಲೇ ಗೊತ್ತಿತ್ತು ಎಂದರೆ ಸರಿಯಲ್ಲ. ಈ ದಾವೆ ಹೂಡುವಾಗಲೇ ಸರ್ವೆ ನಂ 26/2 ಆಗಿರುವ ವಿಷಯ ನನಗೆ ಗೊತ್ತಿತ್ತು ಎಂದರೆ ಅದನ್ನು ನೋಡಲು ಹೋಗಿರಲಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ 26/2 ಆಗಿರುವ ವಿಷಯ ಅದು ಭೂ ಪರಿವರ್ತನೆ ಯಾಗಿರುವ ವಿಷಯ ಮತ್ತು ಅದನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿದ್ದು ಆದ ಕಾರಣ ನಾನು ಸರ್ವೆ ನಂ 26/2 ರ ಮೇಲೆ ಈ ದಾವೆಯನ್ನು ಹೂಡಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ಸರ್ವೆ ನಂ 26/2 ಭೂ ಪರಿವರ್ತನೆ ಆದ ವಿಷಯ ನಾನು ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಆ ವಿಷಯ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ.

ಸರ್ವೆ ನಂ 26 ರ ಖಾತೆ ಮತ್ತು ಪಹಣಿ ರಂಗಪ್ಪರವರ ಹೆಸರಿನಲ್ಲಿದ್ದು ಅವರಿಂದ 12 ನೇ ಪ್ರತಿವಾದಿ ಆಸ್ತಿಯನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ಸರ್ವೆ ನಂ 26 ರ ಮೇಲೆ ಹಕ್ಕು ಇದ್ದು ಅವರಿಂದ 12 ನೇ ಪ್ರತಿವಾದಿ ಖರೀದಿ ಮಾಡಿದ್ದರಿಂದ ಸರ್ವೆ ನಂ 26/2 ಕ್ಕೆ 12 ನೇ

ಪ್ರತಿವಾದಿ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ಈ ವ್ಯವಹಾರ ಕಾನೂನು ಬದ್ದ ಆಗಿದ್ದರಿಂದ ಸರ್ವೆ ನಂ 26/2 ಆಗಿದ್ದು, ಅದು ಭೂ ಪರಿವರ್ತನೆಯಾಗಿದ್ದು ಮತ್ತು 12 ನೇ ಪ್ರತಿವಾದಿಗೆ ಕ್ರಯವಾಗಿದ್ದು ಇವುಗಳನ್ನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. 12 ನೇ ಪ್ರತಿವಾದಿ ಸರ್ವೆ ನಂ 26/2 ನ್ನು ಕಾನೂನುಬದ್ದವಾಗಿ ಖರೀದಿ ಮಾಡಿ ಖರಾಬು ಜಮೀನು ಸೇರಿ 1 ಎಕರೆ 35 ಗುಂಟೆ ಜಮೀನಿನ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಆ ಆಸ್ತಿಯಲ್ಲಿ ಕಾರ್ಖಾನೆಯನ್ನು ಸ್ಥಾಪಿಸುವ ಉದ್ದೇಶದಿಂದ ಚಟುವಟಿಕೆಗಳನ್ನು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಭೂ ಪರಿವರ್ತನೆಯಾದ ಆಸ್ತಿ ಹೆಚ್ಚಿಗೆ ಬೆಲೆ ಬಾಳುತ್ತಿರುವುದರಿಂದ ಸರ್ವೆ ನಂ 26/2 ನ್ನು ಸೇರಿಸದೇ ಕೇವಲ ಹಣವನ್ನು ಪಡೆಯುವ ಉದ್ದೇಶಕ್ಕಾಗಿ 12 ನೇ ಪ್ರತಿವಾದಿಯನ್ನು ಕಾನೂನುಬಾಹಿರವಾಗಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು 12 ನೇ ಪ್ರತಿವಾದಿಯನ್ನು ಸುಳ್ಳು ಪಕ್ಷಗಾರರನ್ನಾಗಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**